**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಪೊಲೀಸ್ ಇಲಾಖೆಯ ಅಧಿಕಾರಿ/ನೌಕರರ ವರ್ಗಾವಣೆ ಬಗ್ಗೆ ಮಾರ್ಗಸೂಚಿಗಳು.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 111 ಪೊಸಇ 2014, ದಿನಾಂಕ: 16.09.2014.
2. ಸರ್ಕಾರದ ಆದೇಶ ಸಂಖ್ಯೆ: ಒಇ 128 ಪೊಸಇ 2015, ದಿನಾಂಕ: 25.06.2015
3. ಸರ್ಕಾರದ ಆದೇಶ ಸಂಖ್ಯೆ: ಒಇ 182 ಪೊಸಇ 2018, ದಿನಾಂಕ: 07.11.2018 ಮತ್ತು 14.11.2018.
4. ಸರ್ಕಾರದ ಆದೇಶ ಸಂಖ್ಯೆ: ಒಇ 35 ಪಿಇಐ 2020, ದಿನಾಂಕ: 15.05.2020
5. ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: ಹೆಚ್ಆರ್.ಎಂ-1(4)/09/2026-27, ದಿನಾಂಕ: 14.07.2026

****

**ಪ್ರಸ್ತಾವನೆ:**

ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ, ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು, (ಸಿವಿಲ್) ರವರ ವರ್ಗಾವಣೆಗೆ ಸಂಬಂಧಪಟ್ಟಂತೆ ಕಾರ್ಯಕಾರಿ ಹುದ್ದೆಗಳಲ್ಲಿ ಕರ್ತವ್ಯನಿರ್ವಹಿಸಲು ಅರ್ಹತೆಯ ಬಗ್ಗೆ ನಿಬಂಧನೆಗಳನ್ನು ವಿಧಿಸಿ, ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಸರ್ಕಾರದ ಆದೇಶದಲ್ಲಿ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು, (ಸಿವಿಲ್) ರವರುಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ಮಾತ್ರ ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

| | |
|---|---|
| 1 | ಪೊಲೀಸ್ ಉಪಾಧೀಕ್ಷಕರ (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆಯನ್ನು ಡಿವೈಎಸ್‌ಪಿ ಹುದ್ದೆಯಲ್ಲಿನ ಕಾರ್ಯಕಾರೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.<br><br>ಈ ಆದೇಶ ಜಾರಿಗೊಂಡ ನಂತರದಲ್ಲಿ ಮುಂಬಡ್ತಿ ಹೊಂದುವ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ರವರುಗಳಿಗೆ ಈ ನಿಬಂಧನೆ ಜಾರಿಯಾಗುತ್ತದೆ. |

| | |
|---|---|
| 2 | ಪೊಲೀಸ್ ನಿರೀಕ್ಷಕರ (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ತಕ್ಷಣ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿನ ಕಾರ್ಯಕಾರೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.<br><br>ಈ ಆದೇಶ ಜಾರಿಗೊಂಡ ನಂತರದಲ್ಲಿ ಮುಂಬಡ್ತಿ ಹೊಂದುವ ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ರವರುಗಳಿಗೆ ಈ ನಿಬಂಧನೆ ಜಾರಿಯಾಗುತ್ತದೆ. |
| 3 | ಪೊಲೀಸ್ ಉಪಾಧೀಕ್ಷಕರ (ಸಿವಿಲ್) ಪೊಲೀಸ್ ನಿರೀಕ್ಷಕರ (ಸಿವಿಲ್) ರವರುಗಳು ಬೆಂಗಳೂರು ನಗರ/ ಮಂಗಳೂರು ನಗರ/ ಮೈಸೂರು ನಗರ/ ಹುಬ್ಬಳ್ಳಿ-ಧಾರವಾಡ ನಗರ / ಬೆಳಗಾವಿ ನಗರ/ ಕಲಬುರಗಿ ನಗರ ಗಳಂತಹ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಅನುಕ್ರಮವಾಗಿ ಕನಿಷ್ಟ ಐದು ವರ್ಷಗಳ ಅವಧಿಗೆ ಮಾತ್ರ ಕಾರ್ಯಕಾರಿ ಹುದ್ದೆಗಳಲ್ಲಿ (ಕಾನೂನು ಸುವ್ಯವಸ್ಥೆ, ಸಂಚಾರ ಮತ್ತು "ಸಿಸಿಬಿ") ಸೇವೆ ಸಲ್ಲಿಸಲು ಅವಕಾಶವಿರುತ್ತದೆ.<br><br>05 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಅಧಿಕಾರಿಗಳು ಆಯಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಿಂದ ಕಡ್ಡಾಯವಾಗಿ ಇತರೆ ಘಟಕಗಳಲ್ಲಿನ ಹುದ್ದೆಗಳಲ್ಲಿ 05 ವರ್ಷಗಳ ಅವಧಿಗೆ ಕರ್ತವ್ಯನಿರ್ವಹಿಸತಕ್ಕದ್ದು.<br><br>ತದನಂತರ ಪೊಲೀಸ್ ಕಮಿಷನರೇಟ್ ಹೊರತುಪಡಿಸಿ ಇತರೆ ಘಟಕಗಳಲ್ಲಿ 05 ವರ್ಷಗಳ ಕಾಲ Cooling Period ಅನ್ನು ಪೂರ್ಣಗೊಳಿಸಿದ ನಂತರ ಆಯಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಪುನಃ ಅರ್ಹತೆಯನ್ನು ಹೊಂದಲಿರುತ್ತಾರೆ.<br><br>ಯಾವುದೇ ಅಧಿಕಾರಿಗಳು ಆಯಾ ಕಮಿಷನರೇಟ್ ವ್ಯಾಪ್ತಿಯಲ್ಲಿ ಕಾರ್ಯಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು 05 ವರ್ಷಗಳ ಕಾಲಾವಧಿಯ ಅವಕಾಶವನ್ನು ನಿಗದಿಪಡಿಸಲಾಗಿದ್ದು, ಈ ಅವಧಿ ಪ್ರಾರಂಭಗೊಳ್ಳುವ ಪೂರ್ವದಲ್ಲಿ ಕಮಿಷನರೇಟ್ ವ್ಯಾಪ್ತಿಯನ್ನು ಹೊರತುಪಡಿಸಿ ಇತರೆ ಘಟಕಗಳಲ್ಲಿ ಕರ್ತವ್ಯನಿರ್ವಹಿಸಿದ ಅವಧಿಯನ್ನು Cooling Period ಗೆ ಲೆಕ್ಕಹಾಕುವಂತಿಲ್ಲ ಅಥವಾ ಪರಿಗಣನೆಗೆ ತೆಗೆದುಕೊಳ್ಳುವಂತಿಲ್ಲ.<br><br>ಸಿಸಿಬಿಯಲ್ಲಿ ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಅಧಿಕಾರಿಗಳು, ಅವರ ಅವಧಿ ಪೂರ್ಣಗೊಳಿಸಿದ ನಂತರ ಅವರುಗಳಿಗೆ ಈ ನಿಬಂಧನೆ ಅನ್ವಯವಾಗುತ್ತದೆ. |
| 4 | ಯಾವುದೇ ಅಧಿಕಾರಿಯು ಅವರು ಮುಂಬಡ್ತಿ ಹೊಂದಿದ ನಂತರ ನಾಲ್ಕು ವಾರಗಳ ಪುನರ್ಮನನ ತರಬೇತಿಯನ್ನು, ಮುಂಬಡ್ತಿ ಹೊಂದಿದ 02 ವರ್ಷದೊಳಗಾಗಿ ಪಡೆಯತಕ್ಕದ್ದು. ಸದರಿ ತರಬೇತಿಯನ್ನು ಪೂರ್ಣಗೊಳಿಸದ ಅಧಿಕಾರಿಗಳನ್ನು ಕಾರ್ಯಕಾರಿ ಹುದ್ದೆಗೆ ಪರಿಗಣಿಸತಕ್ಕದ್ದಲ್ಲ. |

| | |
|---|---|
| 5 | ಪೊಲೀಸ್ ಉಪಾಧೀಕ್ಷಕರು ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳ ವಿರುದ್ಧ ಯಾವುದೇ ಪ್ರಮುಖ ಇಲಾಖಾ ವಿಚಾರಣೆ, ಲೋಕಾಯುಕ್ತ / ಎಸಿಬಿ ಪ್ರಕರಣ ಅಥವಾ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣ ಅಥವಾ ಪೊಲಿಸ್ ಸಿಬ್ಬಂದಿ ಮಂಡಳಿಯು ಅವರು ಅನರ್ಹ ಎಂದು ಪರಿಗಣಿಸಿದ್ದಲ್ಲಿ, ಅಂತಹ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ. |

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಡಿಜಿ ಮತ್ತು ಐಜಿಪಿ ರವರ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿನ ಸೈಬರ್ ಅಪರಾಧ ಪೊಲೀಸ್ ಠಾಣೆಗಳನ್ನು/ ಎಲ್ಲಾ ಮಹಿಳಾ ಪೊಲೀಸ್ ಠಾಣೆಗಳನ್ನು ಹಾಗೂ ರೈಲ್ವೇ ಉಪ ವಿಭಾಗ/ ರೈಲ್ವೇ ಪೊಲೀಸ್ ಠಾಣೆಗಳನ್ನು ಕಾರ್ಯಕಾರಿ ಹುದ್ದೆಗಳನ್ನಾಗಿ ಗುರುತಿಸುವಂತೆ ಹಾಗೂ ಸರ್ಕಾರದ ದಿನಾಂಕ: 15.05.2020ರ ಆದೇಶದಲ್ಲಿ ಪ್ರಕಟಿಸಿರುವ ವರ್ಗಾವಣೆ ಮಾರ್ಗಸೂಚಿಗಳ ಕ್ರಮ ಸಂ: 05ರ ನಂತರ ಈ ಕೆಳಕಂಡ 02 ಅಂಶಗಳನ್ನು ಸೇರ್ಪಡೆಗೊಳಿಸುವ ಅಗತ್ಯತೆ ಇದ್ದು, ಈ ಸಂಬಂಧ ಸರ್ಕಾರದಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. 3

'6.ಪೊಲೀಸ್ ಉಪಾಧೀಕ್ಷಕರು (ಸಿವಿಲ್) ರವರುಗಳು ಕಾರ್ಯಕಾರಿ ಹುದ್ದೆಗೆ ನಿಯುಕ್ತಿಗೊಂಡಿದ್ದಲ್ಲಿ, ಕನಿಷ್ಟ 02 ವರ್ಷದ ಅವಧಿಯನ್ನು ಪೂರ್ಣಗೊಳಿಸಿದ ನಂತರ ಕಡ್ಡಾಯವಾಗಿ ಕನಿಷ್ಟ 02 ವರ್ಷ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು. ಹೀಗೆ ಕನಿಷ್ಟ 02 ವರ್ಷಗಳ ಕಾರ್ಯಕಾರ್ಯೇತರ ಹುದ್ದೆಯಲ್ಲಿ ನಿರ್ವಹಿಸಿದ ಅಧಿಕಾರಿಗಳು ಪುನಃ ಕಾರ್ಯಕಾರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**7.** ಪೊಲೀಸ್ ನಿರೀಕ್ಷಕರು (ಸಿವಿಲ್) ರವರುಗಳು ಕಾರ್ಯಕಾರಿ ಹುದ್ದೆಗೆ ನಿಯುಕ್ತಿಗೊಂಡಿದ್ದಲ್ಲಿ, ಕನಿಷ್ಟ 02 ವರ್ಷದ ಅವಧಿಯನ್ನು ಪೂರ್ಣಗೊಳಿಸಿದ ನಂತರ ಕಡ್ಡಾಯವಾಗಿ ಕನಿಷ್ಟ 01 ವರ್ಷ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು. ಹೀಗೆ ಕನಿಷ್ಟ 01 ವರ್ಷಗಳ ಕಾರ್ಯಕಾರ್ಯೇತರ ಹುದ್ದೆಯಲ್ಲಿ ನಿರ್ವಹಿಸಿದ ಅಧಿಕಾರಿಗಳು ಪುನಃ ಕಾರ್ಯಕಾರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಅರ್ಹತೆಯನ್ನು ಹೊಂದಿರುತ್ತಾರೆ."

ಡಿಜಿ ಮತ್ತು ಐಜಿಪಿ ಅವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಒಇ 233 ಪಿಇಐ 2026,**

**ಬೆಂಗಳೂರು, ದಿನಾಂಕ: 01.08.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು, (ಸಿವಿಲ್) ರವರುಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ಆದೇಶಿಸಲಾಗಿದೆ.

| | |
|---|---|
| 1 | **ಪೊಲೀಸ್ ಉಪಾಧೀಕ್ಷಕರು (ಸಿವಿಲ್)- ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆ:**<br>ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆಯನ್ನು ಡಿವೈಎಸ್‌ಪಿ ವೃಂದದ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು. |
| 2 | **ಪೊಲೀಸ್ ನಿರೀಕ್ಷಕರು (ಸಿವಿಲ್)- ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆ:**<br>ಪೊಲೀಸ್ ನಿರೀಕ್ಷಕರು (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ತಕ್ಷಣ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆಯನ್ನು ಪೊಲೀಸ್ ನಿರೀಕ್ಷಕರ ವೃಂದದ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು. |
| 3 | **ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಕಾರ್ಯಕಾರಿ ಹುದ್ದೆಗಳ ಗರಿಷ್ಠ ಅವಧಿ:**<br>ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು (ಸಿವಿಲ್) ಬೆಂಗಳೂರು ನಗರ/ ಮಂಗಳೂರು ನಗರ/ ಮೈಸೂರು ನಗರ/ ಹುಬ್ಬಳ್ಳಿ-ಧಾರವಾಡ ನಗರ / ಬೆಳಗಾವಿ ನಗರ/ ಕಲಬುರಗಿ ನಗರ ಗಳಂತಹ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಂಚಿತವಾಗಿ ಗರಿಷ್ಠ ಐದು ವರ್ಷಗಳ ಅವಧಿಗೆ ಮಾತ್ರ ಕಾರ್ಯಕಾರಿ ಹುದ್ದೆಗಳಲ್ಲಿ (ಕಾನೂನು ಸುವ್ಯವಸ್ಥೆ, ಸಂಚಾರ, ಸಿಸಿಬಿ, ರೈಲ್ವೆ, ಸೈಬರ್ ಮತ್ತು ಮಹಿಳಾ) ಸೇವೆ ಸಲ್ಲಿಸಲು ಅರ್ಹರಾಗಿರುತ್ತಾರೆ.<br><br>ಪ್ರಸ್ತುತ ರೈಲ್ವೆ, ಸೈಬರ್ ಮತ್ತು ಮಹಿಳಾ ವಿಭಾಗ/ಪೊಲೀಸ್ ಠಾಣೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು (ಸಿವಿಲ್) ಅಧಿಕಾರಿಗಳು, ಅವರ ಅವಧಿ ಪೂರ್ಣಗೊಳಿಸಿದ ನಂತರ ಅವರುಗಳಿಗೆ ಈ ನಿಬಂಧನೆ ಅನ್ವಯವಾಗುತ್ತದೆ.<br><br>ಮೇಲ್ಕಂಡ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಕಾರ್ಯಕಾರಿ ಹುದ್ದೆಗಳಲ್ಲಿ 05 (ಐದು) ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕಡ್ಡಾಯವಾಗಿ ಸಂಬಂಧಿಸಿದ ಪೊಲೀಸ್ ಕಮಿಷನರೇಟ್ |

| | |
|---|---|
| | ವ್ಯಾಪ್ತಿಯಿಂದ ವರ್ಗಾಯಿಸಿ, ಇತರೆ ಘಟಕಗಳಲ್ಲಿನ ಹುದ್ದೆಗಳಲ್ಲಿ ಕನಿಷ್ಠ 05 (ಐದು) ವರ್ಷಗಳ ಕಾಲ ನೇಮಿಸತಕ್ಕದ್ದು.<br><br>ಆನಂತರ, ಸಂಬಂಧಿಸಿದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಹೊರಗಿನ ಘಟಕಗಳಲ್ಲಿ 05 ವರ್ಷಗಳ ಕಾಲ Cooling Period ಅನ್ನು ಪೂರ್ಣಗೊಳಿಸಿದ ನಂತರ ಮಾತ್ರ ಸದರಿ ಅಧಿಕಾರಿಗಳು ಪುನಃ ಆಯಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಹುದ್ದೆಗಳ ಪರಿಗಣನೆಗೆ ಅರ್ಹತೆಯನ್ನು ಹೊಂದುತ್ತಾರೆ.<br><br>ಸ್ಪಷ್ಟೀಕರಣವಾಗಿ, ಯಾವುದೇ ಅಧಿಕಾರಿಗೆ ಸಂಬಂಧಿಸಿದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಕಾರ್ಯಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ನಿಗದಿಪಡಿಸಿರುವ 05 (ಐದು) ವರ್ಷಗಳ ಗರಿಷ್ಠ ಅವಧಿ ಪೂರ್ಣಗೊಂಡ ನಂತರವೇ Cooling Period ಪ್ರಾರಂಭವಾಗುತ್ತದೆ. ಈ ಐದು ವರ್ಷದ ಅವಧಿ ಪೂರ್ಣಗೊಳ್ಳುವ ಮೊದಲು ಕಮಿಷನರೇಟ್ ವ್ಯಾಪ್ತಿಯ ಹೊರಗಿನ ಘಟಕಗಳಲ್ಲಿ ನಿರ್ವಹಿಸಿದ ಸೇವೆಯನ್ನು ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಕಾರ್ಯಕಾರ್ಯೇತರ ಹುದ್ದೆಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಕಾರಣಕ್ಕೂ Cooling Period ಎಂದು ಪರಿಗಣಿಸತಕ್ಕದ್ದಲ್ಲ ಅಥವಾ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ. |
| 4 | **ಮುಂಬಡ್ತಿಯ ನಂತರ ಪುನರ್ ಮನನ ತರಬೇತಿ:**<br><br>ಪೊಲೀಸ್ ಉಪಾಧೀಕ್ಷಕರ (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರ (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ಪ್ರತಿಯೊಬ್ಬ ಅಧಿಕಾರಿಯು ಮುಂಬಡ್ತಿ ದಿನಾಂಕದಿಂದ 02 (ಎರಡು) ವರ್ಷಗಳೊಳಗಾಗಿ ಕಡ್ಡಾಯವಾಗಿ 04 (ನಾಲ್ಕು) ವಾರಗಳ ಪುನರ್ ಮನನ ತರಬೇತಿಯನ್ನು ಪೂರ್ಣಗೊಳಿಸತಕ್ಕದ್ದು. ಸದರಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸದ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ಪರಿಗಣಿಸತಕ್ಕದ್ದಲ್ಲ. |
| 5 | **ಕಾರ್ಯಕಾರಿ ಹುದ್ದೆಗೆ ನಿಯೋಜನೆಗೆ ಅರ್ಹತೆ:**<br><br>ಈ ಕೆಳಕಂಡ ಸಂದರ್ಭಗಳಲ್ಲಿ ಯಾವುದೇ ಪೊಲೀಸ್ ಉಪಾಧೀಕ್ಷಕರು ಮತ್ತು ಪೊಲೀಸ್ ನಿರೀಕ್ಷಕರು(ಸಿವಿಲ್) ರವರನ್ನು ಕಾರ್ಯಕಾರಿ ಹುದ್ದೆಗೆ ನಿಯೋಜಿಸತಕ್ಕದ್ದಲ್ಲ:<br>1) ಅವರ ವಿರುದ್ಧ ಯಾವುದೇ ಪ್ರಮುಖ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ,<br>2) ಲೋಕಾಯುಕ್ತ ಪ್ರಕರಣ ಬಾಕಿ ಇದ್ದಲ್ಲಿ ,<br>3) ಯಾವುದೇ ಅಪರಾಧ ಪ್ರಕರಣ ತನಿಖೆ ಅಥವಾ ವಿಚಾರಣೆಯಲ್ಲಿದ್ದಲ್ಲಿ ಅಥವಾ,<br>4) ಪೊಲೀಸ್ ಸಿಬ್ಬಂದಿ ಮಂಡಳಿಯು ಸದರಿ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ಅನರ್ಹರೆಂದು ಪರಿಗಣಿಸಿದ್ದಲ್ಲಿ. |

| | |
|---|---|
| 6 | **ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಕಾರ್ಯಕಾರಿ ಮತ್ತು ಕಾರ್ಯಕಾರ್ಯೇತರ ಹುದ್ದೆಗಳ ಪರ್ಯಾಯ ಸೇವೆ:**<br><br>ಕಾರ್ಯಕಾರಿ ಹುದ್ದೆಗೆ ನಿಯೋಜಿಸಲ್ಪಟ್ಟ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ರವರು ಕನಿಷ್ಠ 02 (ಎರಡು) ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಕಡ್ಡಾಯವಾಗಿ ಕನಿಷ್ಠ 02 (ಎರಡು) ವರ್ಷಗಳ ಕಾಲ ಕಾರ್ಯಕಾರೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.<br><br>ಹೀಗೆ ಕಾರ್ಯಕಾರೇತರ ಹುದ್ದೆಯಲ್ಲಿ ಕನಿಷ್ಠ ಎರಡು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಮಾತ್ರ ಸದರಿ ಅಧಿಕಾರಿಗಳು ಪುನಃ ಕಾರ್ಯಕಾರಿ ಹುದ್ದೆಗೆ ನಿಯೋಜನೆಗೆ ಅರ್ಹರಾಗಿರುತ್ತಾರೆ. |
| 7 | **ಪೊಲೀಸ್ ನಿರೀಕ್ಷಕರು (ಸಿವಿಲ್) – ಕಾರ್ಯಕಾರಿ ಮತ್ತು ಕಾರ್ಯಕಾರ್ಯೇತರ ಹುದ್ದೆಗಳ ಪರ್ಯಾಯ ಸೇವೆ:**<br><br>ಕಾರ್ಯಕಾರಿ ಹುದ್ದೆಗೆ ನಿಯೋಜಿಸಲ್ಪಟ್ಟ ಪೊಲೀಸ್ ನಿರೀಕ್ಷಕರು (ಸಿವಿಲ್) ರವರು ಕನಿಷ್ಠ 02 (ಎರಡು) ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಕಡ್ಡಾಯವಾಗಿ ಕನಿಷ್ಠ 01 (ಒಂದು) ವರ್ಷದ ಕಾಲ ಕಾರ್ಯಕಾರೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.<br><br>ಹೀಗೆ ಕಾರ್ಯಕಾರೇತರ ಹುದ್ದೆಯಲ್ಲಿ ಕನಿಷ್ಠ ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ ನಂತರ ಮಾತ್ರ ಸದರಿ ಅಧಿಕಾರಿಗಳು ಪುನಃ ಕಾರ್ಯಕಾರಿ ಹುದ್ದೆಗೆ ನಿಯೋಜನೆಗೆ ಅರ್ಹರಾಗಿರುತ್ತಾರೆ. |

ಮುಂದುವರೆದಂತೆ, ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು (ಸಿವಿಲ್) ವೃಂದಗಳ ಕಾರ್ಯಕಾರಿ ಹುದ್ದೆಗಳ ವಿವರಗಳನ್ನು **ಅನುಬಂಧದಲ್ಲಿ** ಇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Digitally signed by
RAJENDER KUMAR KATARIA
Date: 01-08-2026 19:56:45

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-1.
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು-1.